# ಮುದ ನೀಡಿದ ಮಲ್ಲಿಗೆ ಘಮಲು



ಫ್ರಾನ್ಸ್ ಮೂಲದ ಆಂಟೊನಿನ್- ಸೂಹಾದ್

'ನಾವು ಭಾರತಕ್ಕೆ ಬರುವ ಮುನ್ನವೇ ನಾವೂ ಇದೇ ದೇಶಕ್ಕೆ ಸೇರಿದವರು ಎಂಬ ಭಾವನೆಯೇ ನಮ್ಮಲ್ಲಿತ್ತು. ಭಾರತ ಅತ್ಯಂತ ಆಪ್ಯಾಯಮಾನವಾದ ದೇಶ..'

ಇದು ಫ್ರಾನ್ಸ್‌ನಿಂದ ಬೆಂಗಳೂರಿಗೆ ಬಂದ ಆಂಟೊನಿನ್ ಮತ್ತು ಸೂಹಾದ್ ದಂಪತಿ ಅಭಿಪ್ರಾಯ. ಆಂಟೊನಿನ್ ಬೆಂಗಳೂರಿಗೆ ಬರುವ ಮುನ್ನ ಅಮೆರಿಕದಲ್ಲಿದ್ದರು. ಸದ್ಯ ಇಲ್ಲಿ ಕೊಬಾಲ್ಟ್ ಬಿಎಲ್‌ಆರ್ ಎಂಬ ಕಂಪೆನಿಯ ವ್ಯವಸ್ಥಾಪಕರಾಗಿದ್ದಾರೆ. ಪತಿ ಜತೆಯಲ್ಲಿ ಇದೇ ಕಂಪೆನಿಯಲ್ಲಿ ಸೂಹಾದ್ ಅವರೂ ಕೆಲಸ ಮಾಡುತ್ತಾರೆ.

ಇವರಿಬ್ಬರೂ ಬರೀ ಉದ್ಯೋಗ ನಿಮಿತ್ತ ಬೆಂಗಳೂರಿಗೆ ಬಂದಿದ್ದಲ್ಲ. ಬೇರೆ ಬೇರೆ ದೇಶ, ಅಲ್ಲಿನ ವೈವಿಧ್ಯಗಳನ್ನು ಕಂಡು ಆನಂದಿಸಲು ಇವರು ದೇಶ ಬಿಟ್ಟು ಬಂದಿದ್ದಾರಂತೆ.

'ಇಲ್ಲಿಯ ಔದ್ಯೋಗಿಕ ವಾತಾವರಣ ಚೆನ್ನಾಗಿದೆ. ಹಲವಾರು ಜನರನ್ನು ನಿತ್ಯವೂ ಭೇಟಿಯಾಗುತ್ತೇವೆ, ಇಲ್ಲಿನ ಜನ ಸ್ನೇಹಪರರು' ಎನ್ನುತ್ತಾರೆ ಸೂಹಾದ್.

'ಇದುವರೆಗೆ ಇಲ್ಲಿ ಒಳ್ಳೆಯ ಅನುಭವ ಸಿಕ್ಕಿದೆ. ಕೆಲಸ ಮಾಡಲು ಖುಷಿ ಎನಿಸುತ್ತದೆ, ಸಹೋದ್ಯೋಗಿಗಳು ಕೂಡ ಚೆನ್ನಾಗಿ ಸಹಕರಿಸುತ್ತಾರೆ. ಜನ ಬುದ್ಧಿವಂತರು. ಹೊಂದಾಣಿಕೆ ಮನೋಭಾವನೆ ಇಲ್ಲಿದೆ. ಹೀಗಾಗಿ ಕೆಲಸ ಸುಗಮವಾಗಿ ಸಾಗುತ್ತದೆ' ಎನ್ನುವುದು ಆಂಟೊನಿನ್ ನಿಲುವು.

'ಬೆಂಗಳೂರು ಸುಂದರ ನಗರ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಎಂಬ ಖ್ಯಾತಿಯೂ ಇದಕ್ಕಿದೆ ಎಂಬುದನ್ನು ಬಲ್ಲೆ. ಇಡೀ ನಗರದ ಎಲ್ಲ ಭಾಗಗಳನ್ನೂ ನೋಡುವ ಆಸೆ. ಹೀಗಾಗಿ ಸಾಧ್ಯವಾದಷ್ಟು ಮಟ್ಟಿಗೆ ವಾಕಿಂಗ್ ಮಾಡುತ್ತಲೇ ನಗರವನ್ನು, ಜನರನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಮೊದ ಮೊದಲು ಇದು ಬಹಳ ಕಷ್ಟ ಎನಿಸುತ್ತಿತ್ತು. ಆದರೆ ಈಗ ಇದು ಬಹಳ ಖುಷಿ ಕೊಡುತ್ತದೆ'ಎನ್ನುತ್ತಾರೆ ಆಂಟೊನಿನ್.

'ಈ ನಗರ ಜನದಟ್ಟಣೆ, ಸಂಚಾರ ದಟ್ಟಣೆಯಿಂದ ಕೂಡಿದೆ. ಯಾವುದೇ ಸಮಯದಲ್ಲೂ ಕಿರಿಕಿರಿ ಎನಿಸುವಷ್ಟು ಟ್ರಾಫಿಕ್ ಇರುತ್ತದೆ. ಅಷ್ಟೇ ಅಲ್ಲದೆ ನಾನು ನೋಡಿದ ಅನೇಕ ಭಾಗಗಳಲ್ಲಿ ಪಾದಚಾರಿ ರಸ್ತೆಗಳೇ ಇಲ್ಲ. ಬೆಂಗಳೂರಿಗೆ ಬಂದ ಹೊಸದರಲ್ಲಿ ಇಲ್ಲಿನ ಟ್ರಾಫಿಕ್ ಜಾಮ್‌ಗೆ ಹೊಂದಿಕೊಳ್ಳುವುದು ಬಹಳ ಕಷ್ಟ ಎನಿಸಿತ್ತು. ಆದರೆ ಈಗ ಟ್ರಾಫಿಕ್ ಜಾಮ್ ಎಲ್ಲ ಮಾಮೂಲಿ ಅನಿಸಿಬಿಟ್ಟಿದೆ' ಎನ್ನುತ್ತಾರೆ ಆಂಟೊನಿನ್.

'ಬೆಂಗಳೂರು ಎಂದರೆ ಗಾರ್ಡನ್ ಸಿಟಿ, ಸಿಲಿಕಾನ್ ವ್ಯಾಲಿ ಎಂಬ ಅನ್ವರ್ಥಗಳನ್ನು ಹೊಂದಿದೆ ಎನ್ನುವುದನ್ನು ಇಲ್ಲಿಗೆ ಬರುವ ಮೊದಲೇ ತಿಳಿದಿದ್ದೆ. ಅಲ್ಲದೆ ಫ್ರಾನ್ಸ್‌ನಲ್ಲಿರುವಾಗಲೇ ಇಲ್ಲಿಯ ಅಡುಗೆಗಳ ಬಗ್ಗೆ, ಸಿನಿಮಾ ಬಗ್ಗೆ ಗೊತ್ತಿತ್ತು. ಫ್ರಾನ್ಸ್‌ನಲ್ಲಿ ನಮ್ಮ ಪರಿಚಯದ ಒಂದು ಭಾರತೀಯ ಕುಟುಂಬ ಅಲ್ಲಿತ್ತು. ಅವರ ಮನೆಗೆ ಹೋಗಿ ಇಲ್ಲಿನ ಶೈಲಿಯ ಊಟ ತಿಂಡಿಗಳ ರುಚಿ ನೋಡಿದ್ದೆ. ಇಲ್ಲಿ ಬಂದ ಮೇಲೆ ದಕ್ಷಿಣ ಭಾರತೀಯ ಶೈಲಿಯ ತಿಂಡಿ ತಿನಿಸು ಬಹಳ ಇಷ್ಟವಾಗುತ್ತಿದೆ' ಎನ್ನುತ್ತಾರೆ ಸೂಹಾದ್.

ಸೂಹಾದ್‌ಗೆ ಇಲ್ಲಿನ ಸಂಸ್ಕೃತಿ ಅರ್ಥ ಮಾಡಿಕೊಳ್ಳುವುದು ಕಷ್ಟವಾಗಲೇ ಇಲ್ಲವಂತೆ. ಫ್ರಾನ್ಸ್‌ನಲ್ಲಿ ಭಾರತೀಯ ಕುಟುಂಬದ ಜತೆ ಒಡನಾಟವೂ ಇದ್ದ ಕಾರಣ ಇಲ್ಲಿನ ಜೀವನಶೈಲಿ, ಆಹಾರ ಕ್ರಮ, ಸಂಸ್ಕೃತಿ, ನಡವಳಿಕೆಗಳಿಗೆ ಬೇಗನೆ ಹೊಂದಿಕೊಳ್ಳಲು ಸಾಧ್ಯವಾಯಿತಂತೆ. ಫ್ರಾನ್ಸ್‌ನಿಂದ ಹೊಸದಾಗಿ ಇಲ್ಲಿಗೆ ಬರುವವರಿಗೆ ಆಗುವ ಸಮಸ್ಯೆಗಳ ಅನುಭವ ಇವರಿಗೆ ಆಗಲೇ ಇಲ್ಲವಂತೆ.

ಆಂಟೊನಿನ್–ಸೂಹಾದ್ ದಂಪತಿ ಬೆಂಗಳೂರಿನಲ್ಲೇ ಸ್ಕೂಟರ್ ಓಡಿಸಲು ಕಲಿತು ಈಗ ಅದರಲ್ಲೇ ಓಡಾಡುತ್ತಾರೆ. 'ಮೊದಲು ಸ್ಕೂಟರ್ ಕಲಿಯುವುದು, ಓಡಿಸುವುದು ಒಂದು ಸವಾಲಾಗಿತ್ತು. ಇದನ್ನು ಸವಾಲಾಗಿಯೇ ಸ್ವೀಕರಿಸಿ ಕಲಿತ ಕಾರಣ ಸ್ಕೂಟರ್ ಚಾಲನೆ ಕೂಡ ಬೇಗನೆ ಒಲಿಯಿತು' ಎಂದು ಹೇಳುತ್ತಾರೆ ಸೂಹಾದ್.

### ಸೌಹಾರ್ದಯುತ ಹಬ್ಬ

'ಇಲ್ಲಿನ ಹಬ್ಬಗಳ ಆಚರಣೆ ಬಹಳ ಕುತೂಹಲಕಾರಿಯಾದದ್ದು. ಎಲ್ಲ ಹಬ್ಬಗಳನ್ನು ಅದ್ಭುತವಾಗಿ ಆಚರಿಸುವುದರ ಜತೆಗೆ ಧರ್ಮ, ಭಾಷೆ ಮುಂತಾದ ಗಡಿಗಳನ್ನು ಮೀರಿ ಸೌಹಾರ್ದಯುತವಾಗಿ ಹಬ್ಬ ಆಚರಿಸುವುದು ನಿಜಕ್ಕೂ ಖುಷಿಯ ಸಂಗತಿಯೇ' ಎನ್ನುತ್ತಾರೆ ಸೂಹಾದ್.

'ಬೆಂಗಳೂರಿಗೆ ಬಂದಾಗ ಮೊದಲು ಮಳೆಯಲ್ಲಿ ನೆನೆದದ್ದು ಅತ್ಯಂತ ನೆನಪಿನಲ್ಲಿಡುವಂತಹ ಸಂಗತಿ' ಎಂದು ಪುಳಕಗೊಳ್ಳುವ ಸೂಹಾದ್, 'ಇಂತಹ ಮಳೆಯನ್ನು ಹಿಂದೆಂದೂ ನೋಡಿರಲೇ ಇಲ್ಲ. ಜತೆಗೆ ನನಗಿಂತ ಮೊದಲೇ ಪತಿ ಆಂಟೊನಿನ್ ಬೆಂಗಳೂರಿಗೆ ಬಂದಿದ್ದರು. ನಾನು ವಿಮಾನ ನಿಲ್ದಾಣಕ್ಕೆ ಬಂದಾಗ ಮೊದಲ ಬಾರಿಗೆ ನನಗೆ ಮಲ್ಲಿಗೆ ಹೂವಿನ ಹಾರ ಹಾಕಿದರು. ಅದರ ಪರಿಮಳ ಇನ್ನೂ ನನಗೆ ನೆನಪಿನಂಗಳದಲ್ಲಿದೆ' ಎನ್ನುತ್ತಾರೆ ಸೂಹಾದ್.

★ **ಅವನೀಶ್**